ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಮಂಗಳವಾರ ಆನೇ ಫೆಬ್ರವರಿ ೧೯೯೪ ಸಾಯನ ಸೌರ ಮಾಘ, ಶಕ ೧೯೧೫ ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಗ್ಗೆ ೧೧.೧೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ. ವಿ.ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ಸಂತಾಪ ಸೂಚನೆ

ಅಧ್ಯಕ್ಷರು : ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀಮತಿ ಚಂಪಾಭಾಯಿ ಫೀರಜಿ ಬೋಗ್ಲೆಯವರು ದಿನಾಂಕ 23-1-1994ರಂದು ನಿಧನರಾದುದನ್ನು ಈ ಸದನಕ್ಕೆ ವಿಷಾದದಿಂದ ತಿಳಿಸುತ್ತೇನೆ.

ಶ್ರೀಮತಿ ಚಂಪಾಭಾಯಿ ಫೀರಜಿ ಬೋಗ್ಲೆಯವರು ಬೆಳಗಾಂ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನವರಾಗಿದ್ದು, ಕಾಗವಾಡ ಮೀಸಲು ಕ್ಷೇತ್ರದಿಂದ ಎರಡನೆಯ, ಮೂರನೆಯ ಮತ್ತು ನಾಲ್ಕನೆಯ ವಿಧಾನಸಭೆಗೆ ಸತತವಾಗಿ ಆಯ್ಕೆಯಾಗಿದ್ದರು. ಹರಿಜನ ಕಾಲೋನಿಯಲ್ಲಿ ಪ್ರಾಥಮಿಕ ಶಾಲೆಗಳನ್ನು ಹಾಗೂ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿ, ಹಿಂದುಳಿದ ಮತ್ತು ಹರಿಜನರ ಕಲ್ಯಾಣಕ್ಕಾಗಿ ಶ್ರಮಿಸಿರುವ. ಬೆಳಗಾಂ ಜಿಲ್ಲೆಯಲ್ಲಿ ಹಲವಾರು ಸಹಕಾರ ಸಂಘಗಳನ್ನು ಸ್ಥಾಪಿಸಿ, ಜನರ ಏಳಿಗೆಗಾಗಿ ಅಪಾರ ಸೇವೆ ಸಲ್ಲಿಸಿರುತ್ತಾರೆ.

ಶ್ರೀಮತಿಯವರ ಸ್ಮರಣಾರ್ಥವಾಗಿ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಸದನವು ದಿವಂಗತರ ಗೌರವಾರ್ಥವಾಗಿ ಒಂದು ನಿಮಿಷ ಮೌನವನ್ನಾಚರಿಸಿತು.

ಅಧ್ಯಕ್ಷರು : ಈ ಸಭೆ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಸಕ್ಕರೆ ಹಾಗೂ ಸೀಮೆ ಎಣ್ಣೆಯ ವಿತರಣೆ

56 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) ; ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಾರ್ಡುದಾರರಿಗೆ, ಕಾರ್ಡೊಂದಕ್ಕೆ ಇದುವರೆಗೂ ವಿತರಿಸಲಾಗುತ್ತಿದ್ದ ಸಕ್ಕರೆ ಮತ್ತು ಸೀಮೆಎಣ್ಣೆ ಪ್ರಮಾಣವೆಷ್ಟು ಮತ್ತು ಬೆಲೆ ಎಷ್ಟು ?

ಆ) ಈಗ ಆ ಪ್ರಮಾಣವನ್ನು ಕಡಿಮೆ ಮಾಡಿಲಾಗಿದೆಯೇ

ಇ) ಹಾಗಿದ್ದಲ್ಲಿ ಕಡಿಮೆ ಮಾಡಲು ಕಾರಣಗಳೇನು;

ಈ) ಈಗ ಯಾವ ಬೆಲೆಯಲ್ಲಿ ಅವುಗಳನ್ನು ವಿತರಿಸಲಾಗುತ್ತಿದೆ;

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಪ್ರಸ್ತುತ ಪ್ರತಿಯೊಂದು ಪಡಿತರ ಚೀಟಿಗೆ ತಿಂಗಳಿಗೆ ವಿತರಿಸುವ ಸಕ್ಕರೆ ಹಾಗೂ ಸೀಮೆಎಣ್ಣೆ ಪ್ರಮಾಣ ಕೆಳಕಂಡಂತೆ ಇರುತ್ತದೆ.

ಪಟ್ಟಣ ಪ್ರದೇಶ	*ಇತರೆ ಪಟ್ಟಣಗಳು*	*ಗ್ರಾಮಾಂತರ*
ಬೆಂಗಳೂರು ಮತ್ತು ಇತರ ಅನೌಪಚಾರಿಕ ಪಡಿತರ ಪ್ರದೇಶಗಳು		
ಸಕ್ಕರೆ ಪ್ರತಿ ಯೂನಿಟ್ಗೆ 500ಗ್ರಾಂ.ನಂತೆ ಗರಿಷ್ಠ	ಪ್ರತಿ ಕಾರ್ಡಿಗೆ	ಪ್ರತಿ ಕಾರ್ಡಿಗೆ
5 ಕೆ.ಜಿ	3 ಕೆ.ಜಿ.	1.75 ಕೆ.ಜಿ
ಸೀ.ಎಣ್ಣೆ ಅಡಿಗೆ ಅನಿಲ ಇಲ್ಲದ ಕಾರ್ಡುದಾರರಿಗೆ	8 ರಿಂದ	
13 ಲೀ.	10 ಲೀ.	3-4 ಲೀ.

ಅಡಿಗೆ ಅನಿಲ ಹೊಂದಿದ ಎಲ್ಲಾ ಕಾರ್ಡುದಾರರಿಗೆ ತಿಂಗಳೊಂದಕ್ಕೆ 2 ಲೀ. ನಂತೆ ವಿತರಣೆ ಆಗುತ್ತಿದೆ. ಸಕ್ಕರೆ ಬೆಲೆಯು ರಾಜ್ಯದ ಎಲ್ಲಾ ಪ್ರದೇಶಗಳಲ್ಲಿಯೂ 31-1-94 ರವರೆಗೆ ರೂ. 8-30 ಇದ್ದಿತು. 1-2-94 ರಿಂದ ರೂ. 9-05ಕ್ಕೆ ನಿಗಧಿಮಾಡಲಾಗಿರುತ್ತದೆ. ಸೀಮೆಎಣ್ಣೆ ಬೆಲೆಯು ಬೆಂಗಳೂರು ನಗರದಲ್ಲಿ 1 ಲೀಟರ್‌ಗೆ ರೂ. 2-74 ಇದ್ದು ಇತರೆ ಜಿಲ್ಲೆಗಳಲ್ಲಿ ಪ್ರತಿ ಲೀಟರ್ಗೆ ರೂ.2-74 ರಿಂದ ರೂ. 2-93 ರವರೆಗೆ ಇರುತ್ತದೆ.

ಆ) ಇಲ್ಲ. ಆದರೆ ತ್ರಿವರ್ಣ ಪಡಿತರ ಚೀಟಿಗಳ ಹಂಚಿಕೆಯ ಹೆಚ್ಚಳದಿಂದಾಗಿ ವಿತರಣಾ ಪ್ರಮಾಣವು ಬದಲಾವಣೆ ಆಗುತ್ತದೆ.

ಇ) 'ಆ' ದಲ್ಲಿ ಉತ್ತರಿಸಲಾಗಿದೆ.

ಈ) ಮೇಲೆ 'ಆ' ದಲ್ಲಿ ಉತ್ತರಿಸಿದಂತೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಮಂತ್ರಿಗಳು) ಮಾನ್ಯ ಆಹಾರ ಮಂತ್ರಿಗಳ ಪರವಾಗಿ

ಶ್ರೀ ಡಿ.ಬಿ ಚಂದ್ರೇಗೌಡ : ಪಡಿತರ ವ್ಯಾಪ್ತಿಗೆ ಬರತಕ್ಕಂತಹ ಎಲ್ಲಾ ಪದಾರ್ಥಗಳ ಬಗ್ಗೆ ನಾನು ಪ್ರಶ್ನೆ ಕೇಳಿದ್ದುದು. ಆದರೆ ಮಾನ್ಯ ಸಚಿವರು ಕನಿಷ್ಠ ಸಕ್ಕರೆ ಮತ್ತು ಸೀಮೆಎಣ್ಣೆಗೆ ಸೀಮಿತವಾಗಿ ಉತ್ತರಿಸಿದ್ದಾರೆ. ಮೊದಲು ಕೇಂದ್ರ ಸರಕಾರ ಅಡಿಗೆ ಅನಿಲ ಮತ್ತು ಪಡಿತರ ಸಕ್ಕರೆಯ ಬೆಲೆಗಳನ್ನು ಹೆಚ್ಚಿಸಿತು. ನಂತರ ಅಕ್ಕಿ ಗೋಧಿ ವಿತರಣಾ ಬೆಲೆಯನ್ನು ಕೂಡ ಹೆಚ್ಚಿಸಿದರು. ಮೂರನೆಯ ಬಾರಿ ಪೆಟ್ರೋಲ್, ಡೀಸಲ್ ಬೆಲೆಗಳ ಏರಿಕೆಯೂ ಆಯಿತು. ಒಟ್ಟು ಮುಕ್ತ ಪೇಟೆ ಹಾಗೂ ಪಡಿತರ ಬೆಲೆಗಳ ಅಂತರ ಕಡಿಮೆ ಮಾಡತಕ್ಕಂಥದ್ದು ಕೇಂದ್ರ ಸರಕಾರದ ನೀತಿಯೇ? ಅದರ ಉದ್ದೇಶ ಬಹುಶಃ ಪಡಿತರ ವ್ಯವಸ್ಥೆ, ದುರವಸ್ಥೆಗಿಂತ ಮುಕ್ತ ಪೇಟೆಯೇ ಉತ್ತಮವೆಂಬ ಅಭಿಪ್ರಾಯ ಜನಕ್ಕೆ ಬರಲಿ ಎಂದು ಇರಬಹುದು. ತ್ರಿವರ್ಣ ಬಣ್ಣದ ಹೊಸ ಕಾರ್ಡುಗಳ ವಿತರಣೆ ಶೇಕಡ 50 ರಷ್ಟು ಆಗಿಲ್ಲ ಎನ್ನುವುದು ನನ್ನ ಮಾಹಿತಿ. ಇದರ ಮಧ್ಯೆ ಪದೇ ಪದೇ ಬೆಲೆಯೇರಿಕೆಯಾಗುತ್ತಿದೆ ಮತ್ತು ಸಾಮಾನ್ಯರಿಗೆ ಮತ್ತು ಬಡವರಿಗೆ ಸಿಗಬೇಕಾದಂತಹ ಒಟ್ಟು ಸಕ್ಕರೆ ಅಥವಾ ಸೀಮೆಎಣ್ಣೆ ಆಯಾಮವೂ ಕಡಿಮೆಯಾಗುತ್ತಿದೆ. ಈ ಸಾರ್ವಜನಿಕ ವಿತರಣೆ ವ್ಯವಸ್ಥೆ ಮೂಲಕ ಮಾರತಕ್ಕಂತಹ ಅಕ್ಕಿ, ಗೋಧಿ ಸಕ್ಕರೆ ಸೀಮೆಎಣ್ಣೆ ಮತ್ತು ಅನಿಲ ಇವುಗಳು ಅತ್ಯಂತ ಬಡವರಿಗೆ ಅರ್ಧಕ್ಕಿಂತ ಕೂಡ ಕಡಿಮೆ ಒದಗುತ್ತಿದೆ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ಎಂದು ನಾನು ಕೇಳಬಯಸುತ್ತೇನೆ. ಮತ್ತು ಉಳಿದ ಅರ್ಧ ಭಾಗ ಮುಕ್ತ ಮಾರುಕಟ್ಟೆಯಲ್ಲಿ ಸಾರ್ವಜನಿಕ ವಿತರಣೆಗಾಗಿ ಬಿಡುಗಡೆ ಮಾಡುವಂಥಾದ್ದು ಮಾರಾಟವಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ? ಸರಕಾರದ ಗಮನಕ್ಕೆ

ಇದೇನಾದರೂ ಬಂದಿದ್ದರೆ ತೆಗೆದುಕೊಳ್ಳಬಹುದಾದ ಕ್ರಮಗಳೇನು ಎಂಬುದನ್ನು ತಿಳಿಸಬೇಕು. ಮತ್ತು ವಿತರಣಾ ವ್ಯವಸ್ಥೆಯಲ್ಲಿರತಕ್ಕಂತಹ ದೋಷಗಳನ್ನು ಸರಿಪಡಿಸುವುದಕ್ಕೆ ಸರಕಾರವೇನಾದರೂ ಆಲೋಚನೆ ಮಾಡಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಚಂದ್ರೇಗೌಡರು ಕೇಳಿದಂತಹ ಪ್ರಶ್ನೆ ಏನು ಇದೆ ಅದು ಸಕ್ಕರೆ ಮತ್ತು ಕೆರೋಸಿನ್‌ಗೆ ಸಂಬಂಧ ಪಟ್ಟಂತಹ ಪ್ರಶ್ನೆ ಇದೆ. ಅರ್ಬನ್ ಏರಿಯಾದಲ್ಲಿ ಪ್ರತಿ ಯೂನಿಟ್ಟಿಗೆ 500 ಗ್ರಾಂನಂತೆ ಮ್ಯಾಕ್ಸಿಮಮ್ 5 ಕೆ.ಜಿ 1 ಕಾರ್ಡಿಗೆ ಕೊಡಲಾಗುತ್ತಿದೆ. ಬೇರೆ ಪಟ್ಟಣಗಳಲ್ಲಿ 3 ಕೆ.ಜಿ. ಮ್ಯಾಕ್ಸಿಮಮ್ 500 ಗ್ರಾಂ. ರೂರಲ್ ಏರಿಯದಲ್ಲಿ 1.75 ಕೆ.ಜಿ. ಇದೆ. ಬೆಂಗಳೂರಿನಗ್ಗಿ ಕೆರೋಸಿನ್ ನಾನ್ ಗ್ಯಾಸ್ ಕಾರ್ಡ್ ಹೋಲ್ಡರ್ಸ್‌ಗೆ 13 ಲೀಟರ್ ಗ್ಯಾಸ್ ಇರುವವರಿಗೆ 2 ಲೀಟರ್ಸ್ ಇದೆ. ಬೇರೆ ಪಟ್ಟಣಗಳಲ್ಲಿ 8 ರಿಂದ 10 ಲೀಟರ್ ಹಳ್ಳಿಗಳಲ್ಲಿ 3 ರಿಂದ 4 ಲೀಟರ್ ಇದೆ. ಈ ರೀತಿಯಾಗಿ ನೀಡಲಾಗುತ್ತಿದೆ. ಮತ್ತು ಪ್ರೈಸಸ್ ಹೆಚ್ಚಿಗೆ ಆಗಿದೆ ಇದು ಕೇಂದ್ರ ಸರಕಾರಕ್ಕೆ ಸಂಬಂಧಪಟ್ಟಿದ್ದಾಗಿದೆ. ಇದನ್ನು ಕೇಂದ್ರ ಸರ್ಕಾರದವರು ಹೆಚ್ಚಿಸಿದ್ದಾರೆ. As far as kerosene is concerned, ಪ್ರೈಸಸ್ ಏನು ರೈಸ್ ಆಗಿಲ್ಲ. ಉಳಿದಂಥ ವಿಷಯದ ಬಗ್ಗೆ ಅವರು ಪ್ರಸ್ತಾಪ ಮಾಡಿದ್ದಾರೆ ಮತ್ತು ಒಂದು ಅಡ್ವರ್ಟೈಂಟ್ ಮೋಷನನ್ನು ತಂದ ಹಾಗೆ ಕಾಣುತ್ತದೆ. ಅದರ ಬಗ್ಗೆ ಡಿಟೇಲ್ ಆಗಿ ಚರ್ಚೆ ಆದಾಗ ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ಆದರೆ ಇದಕ್ಕೆ ಸಂಬಂಧಪಟ್ಟಂತೆ ಇಷ್ಟು ಮಾತ್ರ ಹೇಳುತ್ತೇನೆ, ಈಗ ಏನು ನಮ್ಮಲ್ಲಿ ಕ್ವಾಂಟಿಟಿ ಸಪ್ಲೈ ಆಗುತ್ತಿದೆ, ಅದನ್ನು ಎಲ್ಲಾ ಜಿಲ್ಲೆಗಳಿಗೆ ಸರಿಸಮಾನವಾಗಿ ಹಂಚತಕ್ಕಂಥದ್ದು ಅಥವಾ ಇರತಕ್ಕಂಥದ್ದನ್ನು ಕಾರ್ಡ್ ಪ್ರಕಾರ ಕೊಡುತ್ತಿದ್ದೇವೆ. ಅವರು ಹೇಳಿದ ಹಾಗೆ ಕೆಲವು ಕಾರ್ಡ್ಸ್‌ಗಳು ಹೆಚ್ಚಿಗೆ ಆಗಿವೆ. ಮೂರು ಬಣ್ಣದ ಕಾರ್ಡು ಅನೇಕ ಕಡೆ ನಾವು ಹಂಚಿದ್ದೇವೆ. ಕಾರ್ಡ್ ಹೆಚ್ಚಿಗೆ ಆಗಿದೆ, ಆದರೆ ಕ್ವಾಂಟಿಟಿ ಹೆಚ್ಚಿಗೆ ಆಗಿಲ್ಲ. ಅದಕ್ಕೆ ತಕ್ಕಂತೆ ಕ್ವಾಂಟಿಟಿ ಕೂಡ ಬರಬೇಕಾಗಿದೆ. ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮೊನ್ನೆ ಫುಡ್ ಮಿನಿಸ್ಟರ್ಸ್ ಕಾನ್ಫರೆನ್ಸ್ ಇದ್ದಾಗ ಇದರ ಬಗ್ಗೆ ಚರ್ಚೆ ಮಾಡಿ ನಮ್ಮ ಸರ್ಕಾರದವರು ಇನ್ನು ಹೆಚ್ಚಿನ ಕ್ವಾಂಟಿಟಿಯನ್ನು ಕೊಡಬೇಕೆಂದು ಕೇಳಿದ್ದಾರೆ. ಬಹುಶಃ ಅದು ಬಂದಮೇಲೆ ಡಿಸ್ಟ್ರಿಬ್ಯೂಷನ್ ಒಳ್ಳೆಯ ರೀತಿಯಾಗಿ ಆಗಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಮೊದಲನೆಯ ದಿವಸವೇ ಬಾಲಗ್ರಹ. ಸಂಬಂಧಪಟ್ಟಂಥ ಮಂತ್ರಿಗಳಿಲ್ಲ. ಆದ್ದರಿಂದ ನಾನು ಹೆಚ್ಚು ಉದ್ದವಾದ ಪ್ರಶ್ನೆಯನ್ನು ಕೇಳುವುದಿಲ್ಲ. ಆದರೆ ನನಗೆ ಸ್ಪೆಷಿಫಿಕ್ ಆಗಿ ಏನು ಬೇಕಾಗಿದೆ ಎಂದರೆ ಈಗ ರಾಜ್ಯಸರ್ಕಾರ ಒಂದು ಕ್ಷೀರ ಯೋಜನೆ ಎಂದು ಮಾಡಿದೆ. ನನ್ನ ದೃಷ್ಟಿಯಲ್ಲಿ ಅದು ಸ್ವಾಗತಾರ್ಹವಾದಂಥ ಕ್ರಮವೇ. ಆದರೆ ಇದಕ್ಕೆ ಇರತಕ್ಕಂಥ ತೊಂದರೆ ಏನು ಎಂದರೆ, ಒಂದು ಬಾಲಗ್ರಹಪೀಡೆ ಅದಕ್ಕೆ. ಶಾಲೆಗಳಿಗೆ ಹಾಲನ್ನು ತೆಗೆದುಕೊಂಡು ಹೋಗುತ್ತಾರೆ. ಕಾಯಿಸುವುದಕ್ಕೆ ಬೇಕಾದಂಥ ಪಾತ್ರೆಗಳು ಇಲ್ಲ. ಪಾತ್ರೆಗಳು ಇವರಿಗೆ ಸಂಬಂಧ ಇಲ್ಲದೇ ಇರಬಹುದು. ಆದರೆ ಅಡಿಗೆ ಅನಿಲವನ್ನಾದರೂ ಕೊಡದಿದ್ದರೆ ಯಾವ ಶಾಲೆಯಲ್ಲೂ ಹಾಲನ್ನು ಬಿಡಿ ಮಾಡಿ ಕೊಡುವುದಕ್ಕಾಗುವುದಿಲ್ಲ. ಆದರ ವ್ಯವಸ್ಥೆ ಬಗ್ಗೆ ನಾನು ಹೋಗುವುದಿಲ್ಲ. ಆದ್ದರಿಂದ ವಿಶೇಷವಾಗಿ ಈ ಹಾಲನ್ನು ಕಾಯಿಸುವುದಕ್ಕೆ ಬೇಕಾಗಿರತಕ್ಕಂಥ ಅಡಿಗೆ ಅನಿಲ ಇವರ ವ್ಯಾಪ್ತಿಗೆ ಬರುವುದು ಇದೆಯಲ್ಲಾ ಇದನ್ನು ಬಿಡುಗಡೆ . ಮಾಡತಕ್ಕಂಥ ಒಂದು ವಿಶೇಷ ವ್ಯವಸ್ಥೆಯನ್ನು ಸರ್ಕಾರ ಏನಾದರೂ ಕೈಗೊಂಡು ಇವರ ಕ್ಷೀರ ಯೋಜನೆ ಪರಿಪೂರ್ಣವಾಗಿ ಗ್ರಾಮೀಣ ಮಕ್ಕಳಿಗೆ ಸಕಾಲಕ್ಕೆ ಮತ್ತು ಸರಿಯಾದ ರೀತಿಯಲ್ಲಿ ವಿತರಣೆಯಾಗುವುದಕ್ಕೆ ಹಾಲನ್ನು ಕಾಯಿಸುವುದಕ್ಕೆ ಬೇಕಾದ ಅನಿಲವನ್ನು ನೀವು ಸಪ್ಲೈ ಮಾಡುವುದಕ್ಕೆ ಏನಾದರೂ ವಿಶೇಷ ಆಜ್ಞೆಯನ್ನೋ ಅಥವಾ ಆದೇಶವನ್ನೋ ಕೊಡುತ್ತೀರೋ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಸಂಬಂಧಪಟ್ಟಂಥ ಇಲಾಖೆಯ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿ ಪರಿಶೀಲಿಸುತ್ತೇನೆ.

ಆಹಾರ ವಿತರಣೆ ಮತ್ತು ಪಡಿತರ ಚೀಟಿಯನ್ನು ನೀಡುವುದು.

60 - ಶ್ರೀ ಎಸ್. ಶಫಿ ಅಹ್ಮದ್ (ತುಮಕೂರು) ; ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1991,1992 ಮತ್ತು 93ನೇ ಸಾಲಿಗೆ ವಿತರಿಸಲಾದ ಹೊಸ ಪಡಿತರ ಚೀಟಿಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿಯನ್ನು ನೀಡುವುದು)

ಆ) ಹೊಸದಾಗಿ ವಿತರಿಸಲಾದ ಪಡಿತರ ಚೀಟಿಗಳಿಗೆ ಆಹಾರಧಾನ್ಯಗಳನ್ನು ನೀಡಲಾಗುತ್ತಿದೆಯೇ?

ಇ. ಇಲ್ಲದಿದ್ದಲ್ಲಿ ಸರ್ಕಾರವು ಹೊಸದಾಗಿ ನೀಡಲಾದ ಪಡಿತರ ಚೀಟಿದಾರರಿಗೆ ಆಹಾರಧಾನ್ಯಗಳನ್ನು ಯಾವಾಗ ವಿತರಿಸಲಾಗುವುದು?

ಈ. ರಾಜ್ಯದಲ್ಲಿ ಘೋಷಿತವಾಗಿಲ್ಲದ ಕೊಳಚೆ ಪ್ರದೇಶದಲ್ಲಿ ವಾಸಿಸುವ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡ, ಆರ್ಥಿಕವಾಗಿ ಹಿಂದುಳಿದ ವರ್ಗದ ಜನರಿಗೆ ತ್ರಿವರ್ಣ ಪಡಿತರ ಚೀಟಿಗಳನ್ನು ನೀಡುವಲ್ಲಿ ಅವಕಾಶವಿದೆಯೇ?

ಉ. ಇಲ್ಲದಿದ್ದಲ್ಲಿ ಯಾವಾಗ ನೀಡಲಾಗುವುದು.

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ. ಪಟ್ಟಿಯನ್ನು ಲಗತ್ತಿಸಿದೆ.

ಆ. ಹೌದು.

ಇ. ಪ್ರಶ್ನೆ ಉದ್ಭವಿಸುವುದಿಲ್ಲ.

ಈ. ಈಗ ಜಾರಿಯಲ್ಲಿರುವ ನೀತಿ ಪ್ರಕಾರ ಅವಕಾಶವಿಲ್ಲ.

ಉ. ಪರಿಶೀಲಿಸಲಾಗುವುದು.

ಕ್ರ. ಸಂಖ್ಯೆ	ಜಿಲ್ಲೆಯ ಹೆಸರುಗಳು	1991ನೇ ಸಾಲಿಗೆ	1992ನೇ ಸಾಲಿಗೆ	1993ನೇ ಸಾಲಿಗೆ
1.	ಬೆಂಗಳೂರು(ಅ.ಪ)	70,305	78,649	52,589
2.	ಬೆಂಗಳೂರು (ನಗರ)	12,641	21,767	30,840
3.	ಬೆಂಗಳೂರು (ಗ್ರಾ)	3,279	16,281	1,99,055
4.	ಬೆಳಗಾವಿ	23,318	60,281	78,419
5.	ಬಳ್ಳಾರಿ	30,898	10,102	99,832
6.	ಬೀದರ್	14,359	4,690	4,049
7.	ಬಿಜಾಪುರ	25,316	4,535	87,019
8.	ಚಿಕ್ಕಮಗಳೂರು	2,057	19,292	30,85
9.	ಚಿತ್ರದುರ್ಗ	3,912	3,978	1,33,972
10.	ದಕ್ಷಿಣ ಕನ್ನಡ	11,258	8,709	78,4895
11.	ಧಾರವಾಡ	28,025	1,15,128	71,054